ವಾರದ ಪತ್ರ

## ಆರೋಗ್ಯಕರ ಸಂದೇಶವಿರಲಿ..

ಮಕ್ಕಳ ಜನಪ್ರಿಯ ಕಾರ್ಯಕ್ರಮ 'ಡ್ರಾಮಾ ಜೂನಿಯರ್ಸ್' ಸೀಝನ್ 3 ಝೀ ಕನ್ನಡ ವಾಹಿನಿಯಲ್ಲಿ ಪ್ರಾರಂಭಗೊಂಡಿದೆ. ಈ ಸಂದರ್ಭದಲ್ಲಿ ಕಾರ್ಯಕ್ರಮ ನಿರ್ದೇಶಕರಲ್ಲಿ ಒಂದು ಮನವಿ ಏನಂದರೆ, ಜೀವನದಲ್ಲಿ ನಡೆಯುವ ಅನೇಕ ಘಟನೆಗಳು, ಸನ್ನಿವೇಶಗಳು ಹಾಸ್ಯದ ಹೊನಲಾಗಿರುತ್ತವೆ. ಅವುಗಳನ್ನು ಗುರುತಿಸುವ ಮನಸ್ಸು ಮತ್ತು ಪ್ರಯತ್ನ ನಮ್ಮದಾಗಿರಬೇಕು. ದಯವಿಟ್ಟು ಮದ್ಯ ವ್ಯಸನದ ವಿಷಯವನ್ನು ಬಳಸಿಕೊಳ್ಳುವುದು ಬೇಡ. ಕೆಲವು ಸಲ ಈ ವ್ಯಸನ ಜೀವನಕ್ಕೆ ಅನಿವಾರ್ಯ ಎಂಬ ಭಾವನೆ ಮೂಡಿಸಬಹುದು. ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗಬಾರದು. ಅದರಂತೆ ಅಂಗವಿಕಲತೆಯನ್ನು ಹಾಸ್ಯಕ್ಕಾಗಿ ಬಳಸಿಕೊಳ್ಳುವುದು ಬೇಡ. ಯಾವುದೇ ಒಂದು ಸಮುದಾಯದ ಜನರ ಮನಸ್ಸಿಗೆ ನೋವು ಉಂಟು ಮಾಡುವ ಯಾವುದೇ ವಿಷಯ ಬೇಡ. ಸಮಾಜಕ್ಕೆ ಒಳ್ಳೆಯ ಆರೋಗ್ಯಕರವಾದ ಸಂದೇಶಗಳನ್ನು ರವಾನಿಸುವ ವಸ್ತು, ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ವಿನಂತಿಸುತ್ತೇನೆ. ಜೀವನದಲ್ಲಿ ಮಕ್ಕಳಿಂದ ದೊಡ್ಡವರು ಕಲಿಯಬೇಕಾದ್ದು ಬಹಳಷ್ಟಿದೆ. ಈ ದಿಶೆಯಲ್ಲಿ ಕಾರ್ಯಕ್ರಮದ ಹೊಣೆ ಹೊತ್ತವರು ಜಾಗೃತಿ ವಹಿಸುವುದು ಉತ್ತಮ.

—ಮೀನಾಕ್ಷಿ ಕೆ. ರಾಮಗುಂಡಿ, ಬೈಲಹೊಂಗಲ

## ಹೊಸತನವಿಲ್ಲದ ಧಾರಾವಾಹಿಗಳು

ಟಿ.ವಿ.ಯಲ್ಲಿ ಪ್ರಸಾರವಾಗುವ ಎಲ್ಲಾ ಧಾರಾವಾಹಿಗಳಲ್ಲಿ ಸ್ತ್ರೀ ಪಾತ್ರ ಪ್ರಧಾನವಾಗಿದೆ. ಪುರುಷ ಪಾತ್ರಗಳಿಗೆ ಯಾವುದೇ ಮಹತ್ವ, ಗತ್ತು ಇಲ್ಲ. ಎಲ್ಲದಕ್ಕೂ ಕೋಲೆ ಬಸವನಂತೆ ತಲೆ ಆಡಿಸುವ ಪಾತ್ರಗಳು ಬೇಸರ ಹುಟ್ಟಿಸುತ್ತವೆ. ಹೊಸತನವಿರುವ ಧಾರಾವಾಹಿಗಳಿಗೇಕೆ ಪ್ರೋತ್ಸಾಹಿಸುತ್ತಿಲ್ಲ? ಲಂಗುಲಗಾಮಿಲ್ಲದೆ ಓಡುತ್ತಿರುವ ಧಾರಾವಾಹಿಗಳು ಎಪಿಸೋಡು ಸಂಖ್ಯೆ ಹೆಚ್ಚಿಸುತ್ತ ಪ್ರೇಕ್ಷಕರ ತಾಳ್ಮೆಗೆ ಸವಾಲು ಒಡ್ಡುತ್ತಿವೆ.

—ಎಸ್.ಪಿ. ಸುಬ್ಬರಾವ್, ದಾವಣಗೆರೆ

## ಮಂಗನಾಟ!

ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುವ 'ಹಳ್ಳಿ ಹೈದಾ ಪ್ಯಾಟೆಗ್ ಬಂದ' ಶೋನಲ್ಲಿ ಯಾವುದೇ ಹುರುಳಿಲ್ಲ. ಜನ ರಿಯಾಲಿಟಿ ಶೋ ನೋಡಲಿಚ್ಛಿಸುತ್ತಾರೆಂದು ಮಂಗನಾಟ ತೋರಿಸಿದರೆ, ಇದನ್ನು ನೋಡಲು ಸಮಯ ಹೊಂದಿಸಿಕೊಳ್ಳಲಾರರು. ಕೆಸರಿನಲ್ಲಿ ಹೊರಳಾಡುವುದು, ಮೊಟ್ಟೆ ಕುಡಿಯುವುದು, ಬೇವಿನರಸ ಕುಡಿಯುವುದು ಅರ್ಥವಿಲ್ಲದ ಆಟಗಳು. ಹಳ್ಳಿ ಹೈದರಿಗೆ ಮೈ ಬಗ್ಗಿಸಿ ದುಡಿದು ಅಭ್ಯಾಸ, ಕೆಲಸ ಕೊಟ್ಟು ಮಾಡಿಸಲಿ.

—ರತ್ನ ಅಶೋಕ ಗೊರವರ, ಧಾರವಾಡ

## ಶಿಕ್ಷಕರೆಂದರೆ ಇಷ್ಟು ಕೀಳೇ?

'ಜೋಡಿ ಹಕ್ಕಿ' ಧಾರಾವಾಹಿ ನೋಡಿ ಬೇಜಾರಾಯಿತು. ಶಾಲಾ ಶಿಕ್ಷಕರಾಗಿ ಬೀದಿಯಲ್ಲಿ ಬದುಕುವುದು ನೋಡಿ ಬೇಸರವಾಯಿತು. ಇಂತಹವರಿಗೆ ಸ್ವಾಭಿಮಾನಿಯಾಗಿ ಬದುಕುವ ರೀತಿಯನ್ನು ಬೇರೆ ತರಹ ತೋರಿಸಬಹುದಿತ್ತು. ಇಷ್ಟೊಂದು ಕೀಳಾಗಿ ಕಾಣುವ ಅವಶ್ಯಕತೆಯಿಲ್ಲ.

—ಕೆ.ಜಿ. ಶೇಖರಪ್ಪ, ಅರಸೀಕೆರೆ

## ಹಿತಮಿತ 'ವಿದ್ಯಾ ವಿನಾಯಕ'

ವಿವಿಧ ಚಾನೆಲ್‌ಗಳಲ್ಲಿ ಅನೇಕ ಧಾರಾವಾಹಿಗಳು ಅಂತ್ಯ ಕಾಣದೆ ವರ್ಷಾನುಗಟ್ಟಲೆ ವೀಕ್ಷಕರ ತಾಳ್ಮೆಗೆಡಿಸುವಂತೆ ಬರುತ್ತಿರುವಾಗ ಝೀ ವಾಹಿನಿಯಲ್ಲಿ ಬರುತ್ತಿದ್ದ 'ವಿದ್ಯಾ ವಿನಾಯಕ' ಧಾರಾವಾಹಿ ಹಿತ ಮಿತವಾದ ಕಂತುಗಳಲ್ಲಿ ಮುಕ್ತಾಯಗೊಂಡಿದೆ.

ಧಾರಾವಾಹಿಗಳಲ್ಲಿ ದ್ವೇಷ, ಅಸೂಯೆ, ಕುಟಿಲತೆ, ಮತ್ಸರದ ಭಾವನೆಗಳನ್ನೇ ಬಿಂಬಿಸುವಂತಹ ಸಂದರ್ಭದಲ್ಲಿ ಈಗ ಬರುವ 'ಶನಿ', 'ಜೈ ಹನುಮಾನ್', 'ಶ್ರೀ ವಿಷ್ಣು ದಶಾವತಾರ...' ಧಾರಾವಾಹಿಗಳು ಪೌರಾಣಿಕ ಹಿನ್ನೆಲೆಯಿದ್ದು ಹಿಂದೂ ಸಂಸ್ಕೃತಿ ಪರಂಪರೆಗಳನ್ನು ಮಕ್ಕಳಿಗೆ ತಿಳಿಸುವಂತಹ ಪ್ರಯತ್ನ ಮಾಡುತ್ತಿರುವುದು ಸ್ವಾಗತಾರ್ಹ. ಈ ಧಾರಾವಾಹಿಗಳು ಉತ್ತಮವಾಗಿ ಮೂಡಿ ಬರಲಿ.

—ಗೀತಾ ಶ್ರೀನಾಥ್, ತುಮಕೂರು

## 'ಸಿಲ್ಲಿ-ಲಲ್ಲಿ' ಕಲಾವಿದರನ್ನೂ ಸೇರಿಸಿ!

ಕಲರ್ಸ್ ಸೂಪರ್‌ನ 'ಪಾಪ ಪಾಂಡು'ವಿನ ಹಲವು ಕಂತುಗಳು ನಗು ಉಕ್ಕಿಸಿದರೂ ಇನ್ನು ಕೆಲವು ಅಷ್ಟಕಷ್ಟೆ. ಇದರಲ್ಲಿ ಹಿಂದಿನ ಕಲಾವಿದರು ಕಾಣಿಸಿಕೊಂಡಿದ್ದಾರೆ (ಉದಾ: ಚಿದಾನಂದ, ಶಾಲಿನಿ, ಶಂಕರ್‌ರಾವ್, ಶ್ರೀನಾಥ್ ವಸಿಷ್ಠ, ರೂಪಾ). ಈ ಧಾರಾವಾಹಿಯನ್ನು ಇನ್ನೂ ನಗೆಪೂರ್ಣ ಮಾಡಲು 'ಸಿಲ್ಲಿ–ಲಲ್ಲಿ'ಯ ಕಲಾವಿದರೂ 'ಪಾಪ ಪಾಂಡು'ವಿನ ಕೆಲ ಕಂತುಗಳಲ್ಲಿ ಮಧ್ಯೆ ಮಧ್ಯೆ ಬರುತ್ತಿದ್ದರೆ ಈ ಹಾಸ್ಯ ಧಾರಾವಾಹಿಗೆ ಮತ್ತಷ್ಟು ಮೆರುಗು ತುಂಬಿದಂತೆ ಆಗುತ್ತದೆ.

—ಸುಂದರ್, ಬೆಂಗಳೂರು

## ಪಾತ್ರಗಳಿಗೆ ನ್ಯಾಯ

ಟಿ.ಎನ್. ಸೀತಾರಾಂ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ 'ಮಗಳು ಜಾನಕಿ' ಪಾತ್ರ ಪರಿಚಯದಿಂದ ಎದ್ದು ಕಾಣುತ್ತಿದೆ. ಕಥೆ ಏನಾದರೂ ಇರಲಿ ಪಾತ್ರಗಳಿಗೆ ನ್ಯಾಯ ಸಲ್ಲಿಸುವಂತಿರಬೇಕು. ಪ್ರಧಾನ ಪಾತ್ರಧಾರಿ ಜಾನಕಿ ಸಾವಿರ ನಕ್ಷತ್ರಗಳಲ್ಲಿ ಒಂದನ್ನು ಹೆಕ್ಕಿ ತೆಗೆದಂತಿದೆ. ವಕೀಲ, ಇನ್ಸ್‌ಪೆಕ್ಟರ್, ಪುಢಾರಿ, ಎಂ.ಎಲ್.ಎ., ಮುಖ್ಯಮಂತ್ರಿ, ಗೃಹಮಂತ್ರಿ, ಡ್ರೈವರ್ ಮಗ, ನಾಯಕಿಯ ತಂಗಿ, ಮನೆ ಆಳು ಹೀಗೆ ಹೇಳುತ್ತಾ ಹೋಗಬಹುದು.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಪ್ರಬುದ್ಧ ವಿವಾದ

ಇತ್ತೀಚೆಗೆ ಅರ್ಜುನ್ ಸರ್ಜ 'ಮಿ ಟೂ' ವಿವಾದ ದೃಶ್ಯಮಾಧ್ಯಮದಲ್ಲಿ ಬೃಹದಾಕಾರದಲ್ಲಿ ವಿಜೃಂಭಿಸಿತ್ತು. ಇಲ್ಲಿ ಗಮನ ಸೆಳೆದಿದ್ದು ಪಬ್ಲಿಕ್ ವಾಹಿನಿಯಲ್ಲಿ 23ರಂದು ಪ್ರಸಾರಗೊಂಡ ಅರ್ಜುನ್ ತಾಯಿ ಲಕ್ಷ್ಮೀ ದೇವಮ್ಮ ಮತ್ತು ಚಿತ್ರ ನಟ ಚೇತನ್ ಮತ್ತು ಅರ್ಜುನ್ ಧ್ರುವ ಅವರ ವಾದ. ಲಕ್ಷ್ಮೀ ದೇವಮ್ಮ ಸಂಯಮದಿಂದ ಮಂಡಿಸಿದ ವಾದ ಮತ್ತು ಚೇತನ್ ಜೊತೆ ವಿವಾದ. ಆಕೆ ಉಪಯೋಗಿಸಿದ ಭಾಷೆ ಮಾತಿನ ಸರಣಿ ಮಾತಿನಲ್ಲಿನ ನಿಖರತೆ ಮತ್ತು ಎದುರಾಳಿಗೆ ತೋರಿಸುತ್ತಿದ್ದ ಗೌರವ ಚೆನ್ನಾಗಿತ್ತು. ಚೇತನ್ ಕೂಡ ಎಲ್ಲಿಯೂ ಭಾಷಾ ಮರ್ಯಾದೆ ಮೀರಲಿಲ್ಲ. ವಿಷಯ ಮಂಡನೆ ತಪ್ಪುದಾರಿಗೆ ಇಳಿಯಲಿಲ್ಲ. ವಾದ ವಿವಾದ ಹೇಗಿರಬೇಕು ಎನ್ನುವುದಕ್ಕೆ ಮಾದರಿಯಾಗಿತ್ತು. ಹಾಗಿಯೇ ಚೇತನ್ ಜೊತೆ ಧ್ರುವ ಸಂಯಮರಹಿತ ವಾದ ಹೇಗಿರಬಾರದು ಎನ್ನುವುದಕ್ಕೆ ಉದಾಹರಣೆ ಆಗಿತ್ತು.

—ಸತ್ಯಬೋಧ ಬೆಂಗಳೂರು

## ಸೊಗಸಿನ ನಟನೆ

ಕಲರ್ಸ್ ಕನ್ನಡದ 'ರಾಧಾ–ರಮಣ' ಧಾರಾವಾಹಿಯು ಕೆಲವೊಮ್ಮೆ ಬೋರು ಎನಿಸಿದರೂ ಸಹ ಉತ್ತಮವಾಗಿ ಮೂಡಿ ಬರುತ್ತಿದೆ. ಅದರಲ್ಲೂ ನಕಲಿ ಅವನಿಯಾಗಿ ರಾಣಿಯ ಪಾತ್ರ ತುಂಬಾ ಚೆನ್ನಾಗಿದೆ. ರಾಣಿ ಪಾತ್ರಧಾರಿ ತುಂಬಾ ಸೊಗಸಾಗಿ ನಟಿಸುತ್ತಿದ್ದಾರೆ.

—ಬಿ. ಚಾಮರಾಜ ಅರಸ್, ಮೈಸೂರು